# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 174 (197) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 28-01-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಾಗಲಕೋಟೆ ಜಿಲ್ಲೆಯ ರಬಕವಿಯ ಮಹೀಷವಾಡಗಿ ಸೇತುವೆ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗಿದೆ: (ಸಂಪೂರ್ಣ ಮಾಹಿತಿ ನೀಡುವುದು) | ಲೋಕೋಪಯೋಗಿ ಇಲಾಖೆ ಅಧೀನದ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ರಬಕವಿ-ಬನಹಟ್ಟಿ ರಸ್ತೆಯ ಮಹಿಷವಾಡಗಿ ಗ್ರಾಮದ ಹತ್ತಿರ ಕೃಷ್ಣ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ:ಲೋಇ 34 ಇಎಪಿ 2014, ದಿನಾಂಕ:31.01.2017 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ದಿನಾಂಕ:19-03-2018 ರಂದು ಕಾಮಗಾರಿ ಪ್ರಾರಂಭಿಸಲಾಗಿರುತ್ತದೆ. ಸದರಿ ಸೇತುವೆಯ ಮೂಲ ವಿನ್ಯಾಸವನ್ನು 2019 ರಲ್ಲಿ ಉಂಟಾದ ಅನಿರೀಕ್ಷಿತ ಭಾರಿ ಪ್ರವಾಹದ ಪರಿಣಾಮವಾಗಿ ನದಿಯಲ್ಲಿ ಹರಿದ ಹೆಚ್ಚಿನ ನೀರಿನ ಮಟ್ಟಕ್ಕೆ ಅನುಗುಣವಾಗಿ ಮರುವಿನ್ಯಾಸಗೊಳಿಸಿ, ಅದರಂತೆ ಕಾಮಗಾರಿಯನ್ನು ದಿನಾಂಕ:10.11.2019 ರಂದು ಪ್ರಾರಂಭಿಸಲಾಗಿರುತ್ತದೆ. |
| ಆ) | ಸದರಿ ಮಹೀಷವಾಡಗಿ ಸೇತುವೆ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ ಸದರಿ ಕಾಮಾಗಾರಿಯು ಕಳೆದ 4 ವರ್ಷಗಳಿಂದ ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಸ್ಥಗಿತಗೊಳ್ಳಲು ಕಾರಣಗಳೇನು; ಈ ಕುರಿತು ಸರ್ಕಾರದ ಕ್ರಮಗಳೇನು: (ವಿವರ ಒದಗಿಸುವುದು) | ಬಂದಿರುತ್ತದೆ.<br><br>ಸದರಿ ಸೇತುವೆ ನಿರ್ಮಾಣ ಕಾಮಗಾರಿಯ ಮೂಲ ವಿನ್ಯಾಸವನ್ನು 2019 ರಲ್ಲಿ ಉಂಟಾದ ಅನಿರೀಕ್ಷಿತ ಭಾರಿ ಪ್ರವಾಹದ ಪರಿಣಾಮವಾಗಿ ನದಿಯಲ್ಲಿ ಹರಿದ ಹೆಚ್ಚಿನ ನೀರಿನ ಮಟ್ಟಕ್ಕೆ ಅನುಗುಣವಾಗಿ ಮರುವಿನ್ಯಾಸಗೊಳಿಸಲಾಗಿದ್ದು, ಅದರಂತೆ 530.170 ಮೀ ರಿಂದ 533.786 ಮೀ ವರೆಗೆ ಏರಿಕೆಯಾದ ನೀರಿನ ಮಟ್ಟಕ್ಕೆ ತಕ್ಕಂತೆ 32.20 ಮೀ ಉದ್ದದ 10 ಅಂಕಣ ಗಳಿಂದ 32.20 ಮೀ ಉದ್ದದ 14 ಅಂಕಣಗಳಿಗೆ ಮರುವಿನ್ಯಾಸಗೊಳಿಸಲಾಗಿರುತ್ತದೆ. ರಬಕವಿ ಕಡೆಯ ಅಪ್ರೋಚ್ ರಸ್ತೆಯ ಉದ್ದವು 285 ಮೀ ನಿಂದ 400 ಮೀ ಗೆ ಹಾಗೂ ಮಹಿಷವಾಡಗಿ ಕಡೆಯ ಅಪ್ರೋಚ್ ರಸ್ತೆಯ ಉದ್ದವು 254 ಮೀ ನಿಂದ 342 ಮೀ ಹೆಚ್ಚಳವಾಗಿರುತ್ತದೆ.<br>ಪ್ರಸ್ತುತ, ಸೇತುವೆಯ ಒಟ್ಟು 15 ತಳಪಾಯಗಳ ಪೈಕಿ 12 ತಳಪಾಯಗಳು, 15 ಸಬ್‌ಸ್ಟ್ರಕ್ಚರ್‌ಗಳ ಪೈಕಿ 7 ಸಬ್‌ಸ್ಟ್ರಕ್ಚರ್ ಹಾಗೂ 14 ಅಂಕಣ ಸ್ಲ್ಯಾಬ್‌ಗಳ ಪೈಕಿ 4 ಅಂಕಣ ಸ್ಲ್ಯಾಬ್‌ಗಳ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿರುತ್ತದೆ.<br>ಕೋವಿಡ್ ಸಾಂಕ್ರಾಮಿಕ ರೋಗ, ಭೂಸ್ವಾಧೀನ ವಿಳಂಬ ಹಾಗೂ 2019 ರಲ್ಲಿ ಉಂಟಾದ ಅನಿರೀಕ್ಷಿತ ಭಾರಿ ಪ್ರವಾಹದ ಪರಿಣಾಮದಿಂದಾಗಿ ವಿನ್ಯಾಸದಲ್ಲಿನ ಬದಲಾವಣೆ ಹಾಗೂ ಪರಿಷ್ಕೃತ ಅಂದಾಜು ಪ್ರಸ್ತಾವನೆ ಅನುಮೋದನೆಯಾಗಬೇಕಾಗಿರುವುದರಿಂದ ಕಾಮಗಾರಿ ವಿಳಂಬವಾಗಿರುತ್ತದೆ.<br>ಬಾಕಿಯಿರುವ ಕಾಮಗಾರಿಗೆ ಅಗತ್ಯವಿರುವ ಭೂಮಿ ಭೂಸ್ವಾಧೀನ ಪಡಿಸಿಕೊಳ್ಳಲು ಮಾನ್ಯ ಜಿಲ್ಲಾಧಿಕಾರಿಗಳು ನಿಗದಿಪಡಿಸಿದ ದರಗಳಿಗೆ ಭೂಮಾಲೀಕರು ಒಪ್ಪದೇ ಇರುವ ಕಾರಣ ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕಾಮಗಾರಿಯು ಜೂನ್- |

| | | |
|---|---|---|
| | | 2024 ರಲ್ಲಿ ಸ್ಥಗಿತಗೊಂಡಿರುತ್ತದೆ. ಭೂಸ್ವಾಧೀನ ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಹೆದ್ದಾರಿ ಕಾಯ್ದೆ ಅಡಿಯಲ್ಲಿ ಕೈಗೊಂಡು, ಮಹಿಷವಾಡಗಿ ಕಡೆಯ 29 ಸರ್ವೆ ನಂಬರ್‌ಗಳಲ್ಲಿ 10 ಸರ್ವೆ ನಂಬರ್‌ಗಳ ಭೂಮಾಲೀಕರಿಗೆ ಪರಿಹಾರ ವಿತರಿಸಲಾಗಿರುತ್ತದೆ. ಮದನಮಟ್ಟಿ ಕಡೆ ಭೂಮಾಲೀಕರಿಗೆ ಐತೀರ್ಪು ನೋಟೀಸ್‌ಗಳನ್ನು ಜಾರಿ ಮಾಡಲಾಗಿದ್ದು, ಭೂಪರಿಹಾರ ವಿತರಿಸುವ ಹಂತದಲ್ಲಿರುತ್ತದೆ. ಬಾಕಿ ಕಾಮಗಾರಿಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು. |
| ಇ) | ಸದರಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರಕ್ಕೆ ಇರುವ ಅಡಚಣೆಗಳೇನು ಹಾಗೂ ಈ ಕುರಿತು ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ನದಿ ಪಾತ್ರದಲ್ಲಿನ ನೀರಿನ ಮಟ್ಟ ಇಳಿಕೆಯಾಗದೇ ಇರುವುದರಿಂದ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ ಹಾಗೂ ಬಾಕಿಯಿರುವ ಕಾಮಗಾರಿಗೆ ಅವಶ್ಯವಿರುವ ಹೆಚ್ಚುವರಿ ಭೂಸ್ವಾಧೀನಕ್ಕೆ ಮಾನ್ಯ ಜಿಲ್ಲಾಧಿಕಾರಿಗಳು ನಿಗದಿಪಡಿಸಿದ ದರಗಳಿಗೆ ಭೂಮಾಲೀಕರು ಒಪ್ಪದೇ ಇರುವ ಕಾರಣ ನಿಗಧಿತ ಪ್ರಗತಿಯನ್ನು ಸಾಧಿಸಲಾಗಿರುವುದಿಲ್ಲ. ಅದರಂತೆ, ಭೂಸ್ವಾಧೀನ ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಹೆದ್ದಾರಿ ಕಾಯ್ದೆ ಅಡಿಯಲ್ಲಿ ಕೈಗೊಂಡು, ಪ್ರಸ್ತುತ ಮಹಿಷವಾಡಗಿ ಕಡೆಯ 29 ಸರ್ವೆ ನಂಬರ್‌ಗಳಲ್ಲಿ 10 ಸರ್ವೆ ನಂಬರ್‌ಗಳ ಭೂಮಾಲೀಕರಿಗೆ ಪರಿಹಾರ ವಿತರಿಸಲಾಗಿರುತ್ತದೆ. ಮದನಮಟ್ಟಿ ಕಡೆ ಭೂಮಾಲೀಕರಿಗೆ ಐತೀರ್ಪು ನೋಟೀಸ್‌ಗಳನ್ನು ಜಾರಿ ಮಾಡಲಾಗಿದ್ದು, ಭೂಪರಿಹಾರ ವಿತರಿಸುವ ಹಂತದಲ್ಲಿರುತ್ತದೆ. ಮುಂದುವರೆದು, ಸೇತುವೆ ನಿರ್ಮಾಣ ಕಾಮಗಾರಿಯ ಪರಿಷ್ಕೃತ ಅಂದಾಜು ಪ್ರಸ್ತಾವನೆಗೆ ಸಚಿವ ಸಂಪುಟದ ಅನುಮೋದನೆ ಪಡೆಯಲು ಕ್ರಮವಹಿಸಲಾಗಿದ್ದು, ಪರಿಷ್ಕೃತ ಅಂದಾಜಿಗೆ ಅನುಮೋದನೆ ಪಡೆದು ಸೇತುವೆ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ. |
| ಈ) | ಕಾಮಗಾರಿ ವಿಳಂಬದಿಂದಾಗಿ ಆ ಭಾಗದ ರೈತರಿಗೆ ತೊಂದರೆಯಾಗಿ ಉಪವಾಸ ಸತ್ಯಾಗ್ರಹ, ಪ್ರತಿಭಟನೆ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ; ಹಾಗಿದ್ದಲ್ಲಿ ಇಲ್ಲಿವರೆಗೆ ಕಾಮಗಾರಿ ಪ್ರಾರಂಭಿಸದೇ ಇರಲು ಕಾರಣಗಳೇನು: (ವಿವರ ನೀಡುವುದು) | ಬಂದಿರುತ್ತದೆ.<br>ನದಿ ಪಾತ್ರದಲ್ಲಿನ ನೀರಿನ ಮಟ್ಟ ಇಳಿಕೆಯಾಗದೇ ಇರುವುದರಿಂದ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ ಹಾಗೂ ಬಾಕಿಯಿರುವ ಕಾಮಗಾರಿಗೆ ಅವಶ್ಯವಿರುವ ಹೆಚ್ಚುವರಿ ಭೂಸ್ವಾಧೀನಕ್ಕೆ ಮಾನ್ಯ ಜಿಲ್ಲಾಧಿಕಾರಿಗಳು ನಿಗದಿಪಡಿಸಿದ ದರಗಳಿಗೆ ಭೂಮಾಲೀಕರು ಒಪ್ಪದೇ ಇರುವ ಕಾರಣ ನಿಗಧಿತ ಪ್ರಗತಿಯನ್ನು ಸಾಧಿಸಲಾಗಿರುವುದಿಲ್ಲ. ಪ್ರಸ್ತುತ ಕೊಳವೆ ಮಾರ್ಗಗಳ ಸ್ಥಳಾಂತರ ಮತ್ತು ಮಾಲ್ಕಿ ಗಿಡ ಮರ ಗಳನ್ನು ತೆರವುಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಪರಿಷ್ಕೃತ ಅಂದಾಜು ಪ್ರಸ್ತಾವನೆಗೆ ಅನುಮೋದನೆ ಪಡೆದು ಬಾಕಿಯಿರುವ ಸೇತುವೆ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. |
| ಉ) | ಸದರಿ ಮಹಿಷವಾಡಗಿ ಸೇತುವೆ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? | ಸದರಿ ಸೇತುವೆ ನಿರ್ಮಾಣ ಕಾಮಗಾರಿಯನ್ನು ಡಿಸೆಂಬರ್–2026 ರಳೊಗೆ ಪೂರ್ಣಗೊಳಿಸಲು ಕ್ರಮ ವಹಿಸಲಾಗಿದೆ. |

ಸಂಖ್ಯೆ. ಲೋಇ 33 ಇಎಪಿ 2026

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು